**All India Radio: Bangalore**
**National Bulletins In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**10.07.2025 / 7.35 am**
**<><*<><>*><>**

ಮುಖ್ಯಾಂಶಗಳು

೧. ನಮೀಬಿಯಾ ಸಂಸತ್ ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಭಾಷಣ

೨. ಭಾರತೀಯ ರೈಲ್ವೆಯಿಂದ ಪಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ೯ ಸಾವಿರಕ್ಕೂ ಹೆಚ್ಚು ನೇಮಕಾತಿ

೩. ಬ್ರೆಜಿಲ್ ಸೇರಿದಂತೆ ಎಂಟು ದೇಶಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸಿದ ಅಮೆರಿಕ

೪. ಟಿ೨೦ ಕ್ರಿಕೆಟ್: ಇಂಗ್ಲೆಂಡ್ ವಿರುದ್ಧ ೩-೧ ಅಂತರದಿಂದ ಸರಣಿ ವಶಪಡಿಸಿಕೊಂಡ ಭಾರತೀಯ ಮಹಿಳಾ ತಂಡ

**><><><><><><><**

ಆಫ್ರಿಕಾವನ್ನು ಕೇವಲ ಕಚ್ಚಾ ವಸ್ತುಗಳ ಮೂಲವಾಗಿ ನೋಡಬಾರದು. ಬದಲಾಗಿ ಮೌಲ್ಯ ಸೃಷ್ಟಿ ಮತ್ತು ಸುಸ್ಥಿರ ಬೆಳವಣಿಗೆಗೆ ಕಾರಣವಾಗಬೇಕಾದ ಖಂಡವಾಗಿ ನೋಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನಮೀಬಿಯಾ ಸಂಸತ್ ಉದ್ದೇಶಿಸಿ ಮಾತನಾಡಿದ ಅವರು, ಆಫ್ರಿಕನ್ ಒಕ್ಕೂಟದ ೨೦೬೩ ರ ಕಾರ್ಯಸೂಚಿಗೆ, ವಿಶೇಷವಾಗಿ ಅದರ ಕೈಗಾರಿಕೀಕರಣ ಗುರಿಗಳಿಗೆ ಭಾರತದ ಬಲವಾದ ಬೆಂಬಲವನ್ನು ಸೂಚಿಸಿದರು. ರಕ್ಷಣೆ ಮತ್ತು ಭದ್ರತೆಯಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಹಯೋಗವನ್ನು ಗಾಢವಾಗಿಸಲು ಭಾರತದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.ಆಫ್ರಿಕನ್ ರಾಷ್ಟ್ರವಾದ  ನಮೀಬಿಯಾ ತನ್ನ ಮೊದಲ ಮಹಿಳಾ ಅಧ್ಯಕ್ಷೆಯನ್ನು ಆಯ್ಕೆ ಮಾಡಿದ್ದಕ್ಕಾಗಿ ಅವರು ಶ್ಲಾಘಿಸಿದರು. ಇದನ್ನು ಐತಿಹಾಸಿಕ ಕ್ಷಣ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳ ಬಲಕ್ಕೆ ಸಾಕ್ಷಿ ಎಂದು ಅವರು ಕರೆದರು. ಭಾರತದಲ್ಲಿ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ಮೊದಲ ಬುಡಕಟ್ಟು ಮಹಿಳೆ ದ್ರೌಪದಿ ಮುರ್ಮು ಅವರನ್ನು ಉಲ್ಲೇಖಿಸಿ,

ಅಂಚಿನಲ್ಲಿರುವವರನ್ನು ಸಬಲೀಕರಣಗೊಳಿಸುವ ಸಾಂವಿಧಾನಿಕ ಪ್ರಜಾಪ್ರಭುತ್ವದ ಶಕ್ತಿಯನ್ನು ಪ್ರಧಾನಿ ಮೋದಿ ಒತ್ತಿ ಹೇಳಿದರು. ಭಾರತ ಮತ್ತು ನಮೀಬಿಯಾ ಬಲವಾದ ಪ್ರಜಾಪ್ರಭುತ್ವ ಆದರ್ಶಗಳು ಮತ್ತು ಮೌಲ್ಯಗಳನ್ನು ಹಂಚಿಕೊಳ್ಳುತ್ತವೆ ಎಂದು ಹೇಳಿದ ಅವರು, ನಮೀಬಿಯಾದ ಸ್ಥಾಪಕ ಪಿತಾಮಹ ಡಾ. ಸ್ಯಾಮ್ ನುಜೋಮಾ ಅವರ ಪರಂಪರೆಯನ್ನು ನೆನಪಿಸಿಕೊಂಡರು. ಕೈಜೋಡಿಸಿ, ಜಾಗತಿಕ ದಕ್ಷಿಣದೊಂದಿಗೆ ಒಗ್ಗಟ್ಟಿನಿಂದ ನಡೆಯುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಧ್ವನಿ ; ಪ್ರಧಾನಮಂತ್ರಿ ನರೇಂದ್ರ ಮೋದಿ (೨೫ ಸೆಕೆಂಡುಗಳು)

ಇದಕ್ಕೂ ಮುನ್ನ  ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ ಸ್ಥಾಪನೆ ಮತ್ತು ಆರೋಗ್ಯ ಮತ್ತು ಔಷಧ ಕ್ಷೇತ್ರದಲ್ಲಿ ಸಹಕಾರದ ಕುರಿತು ಒಪ್ಪಂದಗಳಿಗೆ ಭಾರತ ಮತ್ತು ನಮೀಬಿಯಾ ಸಹಿ ಹಾಕಿದವು. ಕೇಂದ್ರೀಯ ಔಷಧ ಸಂಶೋಧನಾ ಸಂಸ್ಥೆ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟಕ್ಕೆ ನಮೀಬಿಯಾ ಸೇರ್ಪಡೆಗೆ ಸ್ವೀಕಾರ ಪತ್ರಗಳನ್ನು ಸಹ ಪ್ರಸ್ತುತಪಡಿಸಲಾಗಿದೆ. ನಮೀಬಿಯಾ ರಾಜಧಾನಿ ವಿಂಡ್‌ಹೋಕ್‌ನಲ್ಲಿರುವ ಸ್ಟೇಟ್ ಹೌಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ನಮೀಬಿಯಾ ಅಧ್ಯಕ್ಷರ ನಡುವಿನ ನಿಯೋಗ ಮಟ್ಟದ ಮಾತುಕತೆಯ ನಂತರ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಡಿಜಿಟಲ್ ತಂತ್ರಜ್ಞಾನ, ರಕ್ಷಣೆ, ಭದ್ರತೆ, ಕೃಷಿ, ಆರೋಗ್ಯ ರಕ್ಷಣೆ, ಶಿಕ್ಷಣ ಮತ್ತು ನಿರ್ಣಾಯಕ ಖನಿಜಗಳಂತಹ ಕ್ಷೇತ್ರಗಳಲ್ಲಿನ ಸಹಕಾರವು ಚರ್ಚೆಗಳಲ್ಲಿ ಪ್ರಮುಖ ವಿಷಯವಾಗಿತ್ತು ಎಂದು ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಕೊಡುಗೆಗಳನ್ನು ಗುರುತಿಸಿ ನಮೀಬಿಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

><><><><><><><

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ರಾಂಚಿಯಲ್ಲಿ ನಡೆಯಲಿರುವ ೨೭ನೇ ಪೂರ್ವ ವಲಯ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ನಾಲ್ಕು ಪೂರ್ವ ರಾಜ್ಯಗಳಾದ ಜಾರ್ಖಂಡ್, ಬಿಹಾರ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ೭೦ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಮುಖ್ಯಮಂತ್ರಿ ಮೋಹನಚರಣ್ ಮಾಂಝಿ, ಉಪಮುಖ್ಯಮಂತ್ರಿ ಪಾರ್ವತಿ ಪರಿದಾ, ಸಚಿವ ಮುಖೇಶ್ ಮಹಾಲಿಂಗಂ ಒಡಿಶಾವನ್ನು ಪ್ರತಿನಿಧಿಸಲಿದ್ದಾರೆ. ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಬಿಹಾರವನ್ನು ಪ್ರತಿನಿಧಿಸಲಿದ್ದಾರೆ ಮತ್ತು ಪಶ್ಚಿಮ ಬಂಗಾಳವನ್ನು ಸಚಿವೆ ಚಂದ್ರಿಕಾ ಭಟ್ಟಾಚಾರ್ಯ ಪ್ರತಿನಿಧಿಸಲಿದ್ದಾರೆ. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೆನ್, ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಡಿಜಿಪಿ ಮತ್ತು ಇತರೆ ಅಧಿಕಾರಿಗಳು ಜಾರ್ಖಂಡ್ ಅನ್ನು ಪ್ರತಿನಿಧಿಸಲಿದ್ದಾರೆ.

><><><><><><><

ಪ್ರಮುಖ ನೇಮಕಾತಿ ಅಭಿಯಾನದಲ್ಲಿ, ಭಾರತೀಯ ರೈಲ್ವೆ, ೨೦೨೫-೨೬ರ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ೯ ಸಾವಿರಕ್ಕೂ ಹೆಚ್ಚು ನೇಮಕಾತಿಗಳನ್ನು ಮಾಡಿದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ೫೦ ಸಾವಿರಕ್ಕೂ ಹೆಚ್ಚು ಉದ್ಯೋಗಗಳನ್ನು ನೀಡುವುದಾಗಿ ರೈಲ್ವೆ ಇಲಾಖೆ ತಿಳಿಸಿದೆ. ನವೆಂಬರ್ ೨೦೨೪ ರಿಂದ, ರೈಲ್ವೆ ನೇಮಕಾತಿ ಮಂಡಳಿಗಳು ಒಟ್ಟು ೫೫ ಸಾವಿರದ ೧೯೭ ಹುದ್ದೆಗಳನ್ನು ಒಳಗೊಂಡ ಏಳು ವಿಭಿನ್ನ ಅಧಿಸೂಚನೆಗಳಲ್ಲಿ ೧.೮೬ ಕೋಟಿಗೂ ಹೆಚ್ಚು ಅಭ್ಯರ್ಥಿಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ನಡೆಸಿವೆ. ಈ ಪರೀಕ್ಷೆಗಳು ೨೦೨೪ ರಿಂದ ಇಲ್ಲಿಯವರೆಗೆ ೧ ಲಕ್ಷ ೮ ಸಾವಿರ ಹುದ್ದೆಗಳನ್ನು ಘೋಷಿಸಿರುವ ವಿಶಾಲ ನೇಮಕಾತಿಯ ಭಾಗವಾಗಿದೆ. ರೈಲ್ವೆ ಮುಂದಿನ ಹಣಕಾಸು ವರ್ಷಕ್ಕೆ ತನ್ನ ನೇಮಕಾತಿ ಪ್ರಯತ್ನಗಳನ್ನು ವಿಸ್ತರಿಸಲು ಯೋಜಿಸಿವೆ. ೨೦೨೬-೨೭ರ ಹಣಕಾಸು ವರ್ಷದಲ್ಲಿ ಇನ್ನೂ ೫೦ ಸಾವಿರ ನೇಮಕಾತಿಗಳನ್ನು ಮಾಡುವ ನಿರೀಕ್ಷೆಯಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

><><><><><><><

ಹಣಕಾಸು ಕಾರ್ಯವಿಧಾನಗಳು, ಸಾಂಸ್ಥಿಕ ಅಭಿವೃದ್ಧಿ ಮತ್ತು ಸಾಮರ್ಥ್ಯವರ್ಧನೆಯಲ್ಲಿ ಹೂಡಿಕೆಗಳು ಅಳೆಯಬಹುದಾದ ಫಲಿತಾಂಶಗಳನ್ನು ನೀಡುವ ಉದ್ದೇಶವನ್ನು ಹೊಂದಿವೆ ಎಂದು ಪ್ರಧಾನಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಡಾ. ಪಿ.ಕೆ.ಮಿಶ್ರಾ ಹೇಳಿದ್ದಾರೆ. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಸಾರ್ವಜನಿಕ ನೀತಿ ಕೇಂದ್ರದ ಸಂಸ್ಥಾಪನಾ ದಿನದ ಬೆಳ್ಳಿ ಮಹೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಪತ್ತು-

ಸಂಬಂಧಿತ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು, ಭಾರತದ ವಿಕಸನಗೊಳ್ಳುತ್ತಿರುವ ವಿಪತ್ತು ಅಪಾಯ ನಿರ್ವಹಣಾ ವ್ಯವಸ್ಥೆಯ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ ಎಂದು ಪ್ರತಿಪಾದಿಸಿದ್ದಾರೆ.

><><><><><><><

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಂಟು ರಾಷ್ಟ್ರಗಳಾದ ಬ್ರೆಜಿಲ್, ಶ್ರೀಲಂಕಾ, ಅಲ್ಜೀರಿಯಾ, ಇರಾಕ್, ಲಿಬಿಯಾ, ಫಿಲಿಪೈನ್ಸ್, ಮೊಲ್ಡೊವಾ ಮತ್ತು ಬ್ರೂನಿಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಹೊಸ ಸುತ್ತಿನ ಸುಂಕಗಳನ್ನು ಘೋಷಿಸಿದ್ದಾರೆ. ಈ ಸುಂಕಗಳು ಆಗಸ್ಟ್ ೧ ರಿಂದ ಜಾರಿಗೆ ಬರಲಿವೆ. ಬ್ರೆಜಿಲ್, ಮೇಲೆ ಅತ್ಯಧಿಕ ಶೇಕಡ ೫೦ ರಷ್ಟು ಸುಂಕವನ್ನು ಅಮೆರಿಕ ವಿಧಿಸಲಿದೆ. ಶ್ರೀಲಂಕಾ, ಇರಾಕ್, ಅಲ್ಜೀರಿಯಾ ಮತ್ತು ಲಿಬಿಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಶೇಕಡ ೩೦ ರಷ್ಟು ಸುಂಕವನ್ನು ವಿಧಿಸಲಿದೆ. ಮೊಲ್ಡೊವಾ ಮತ್ತು ಬ್ರೂನಿ ಶೇಕಡ ೨೫ ರಷ್ಟು ಸುಂಕವನ್ನು ಎದುರಿಸಬೇಕಾಗುತ್ತದೆ. ಫಿಲಿಪೈನ್ಸ್ ಗೆ ಶೇಕಡ ೨೦ ರಷ್ಟು ಸುಂಕವನ್ನು ಅಮೆರಿಕ ವಿಧಿಸಲಿದೆ. ಅಮೆರಿಕನ್ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಮೇಲಿನ ಸುಂಕವನ್ನು ಹೆಚ್ಚಿಸಲು ನಿರ್ಧರಿಸಿದರೆ, ಅದೇ ಪ್ರಮಾಣದಲ್ಲಿ ಸುಂಕ ದರವನ್ನು ಹೆಚ್ಚಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಆದಾಗ್ಯೂ, ಈ ದೇಶಗಳು ತಮ್ಮ ವ್ಯಾಪಾರ ನೀತಿಗಳನ್ನು ಪರಿಷ್ಕರಿಸಿದರೆ, ಈ ಸುಂಕಗಳನ್ನು ಕಡಿಮೆ ಮಾಡುವ ಇಚ್ಛೆಯನ್ನು ಅಮೆರಿಕ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ.

><><><><><><><

ಭಾರತೀಯ ಕ್ರೀಡಾ ಪ್ರಾಧಿಕಾರದ ಉಪ ನಿರ್ದೇಶಕ ಮತ್ತು ಪ್ರಸ್ತುತ ರೋಹ್ಟಕ್‌ನಲ್ಲಿರುವ ರಾಷ್ಟ್ರೀಯ ಬಾಕ್ಸಿಂಗ್ ಅಕಾಡೆಮಿಯ ಉಸ್ತುವಾರಿಯಾಗಿ ಸೇವೆ ಸಲ್ಲಿಸುತ್ತಿರುವ ಸಚಿನ್ ಕೆ. ಅವರಿಗೆ ಜಪಾನ್ ಸರ್ಕಾರದಿಂದ ಪ್ರತಿಷ್ಠಿತ **MEXT** ವಿದ್ಯಾರ್ಥಿವೇತನ ನೀಡಲಾಗಿದೆ. ವಿಶ್ವವಿದ್ಯಾಲಯ ಶಿಫಾರಸು ವಿಭಾಗದ ಅಡಿಯಲ್ಲಿ, ಸಚಿನ್ ೨೦೨೫ ರ ಸೆಪ್ಟೆಂಬರ್‌ನಿಂದ ಜಾಗತಿಕವಾಗಿ ಮೆಚ್ಚುಗೆ ಪಡೆದ ತ್ಸುಕುಬಾ ವಿಶ್ವವಿದ್ಯಾಲಯದಲ್ಲಿ ಕ್ರೀಡೆ ಮತ್ತು ಒಲಿಂಪಿಕ್ ಅಧ್ಯಯನದಲ್ಲಿ ಎರಡು ವರ್ಷಗಳ ಸ್ನಾತಕೋತ್ತರ ಕಾರ್ಯಕ್ರಮವನ್ನು ಮುಂದುವರಿಸಲಿದ್ದಾರೆ. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ

ಸಚಿನ್, ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಎಂಟು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದು, ಪ್ರತಿಭಾ ಗುರುತಿಸುವಿಕೆ ಮತ್ತು ಅಕಾಡೆಮಿ ಬೆಂಬಲದ ಮೇಲೆ ಕೇಂದ್ರೀಕರಿಸುವ ಖೇಲೋ ಇಂಡಿಯಾ ಪ್ರತಿಭಾ ಅಭಿವೃದ್ಧಿ ಯೋಜನೆಯಂತಹ ಪ್ರಮುಖ ಉಪಕ್ರಮಗಳನ್ನು ಮುನ್ನಡೆಸಿದ್ದಾರೆ.

><><><><><><><

ನಮಾಮಿ ಗಂಗೆ ಕಾರ್ಯಕ್ರಮದಡಿಯಲ್ಲಿ ಸ್ಮಾರ್ಟ್ ನದಿ ನಿರ್ವಹಣೆ ಕುರಿತು ಚರ್ಚಿಸಲು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ನಿನ್ನೆ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು.

><><><><><><><

ಕ್ರಿಕೆಟ್‌ನಲ್ಲಿ, ಭಾರತೀಯ ಮಹಿಳಾ ತಂಡ ನಿನ್ನೆ ರಾತ್ರಿ ಎಮಿರೇಟ್ಸ್ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದ ನಾಲ್ಕನೇ ಟಿ೨೦ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ಅನ್ನು ಆರು ವಿಕೆಟ್‌ಗಳಿಂದ ಸೋಲಿಸಿ ಐದು ಪಂದ್ಯಗಳ ಸರಣಿಯನ್ನು ೩-೧ ಅಂತರದಿಂದ ವಶಪಡಿಸಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತನ್ನ ೨೦ ಓವರ್‌ಗಳಲ್ಲಿ ೭ ವಿಕೆಟ್‌ಗಳಿಗೆ ೧೨೬ ರನ್ ಗಳಿಸಿತು. ಇದಕ್ಕೆ ಉತ್ತರವಾಗಿ, ಭಾರತ ಕೇವಲ ೧೭ ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗಳ ನಷ್ಟಕ್ಕೆ ಗುರಿ ತಲುಪಿತು.

><><><><><><><

ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಿನ್ನೆ ನಡೆದ ಆರ್ಚರಿ ವಿಶ್ವಕಪ್ ಹಂತ ೪ ರ ಮಹಿಳಾ ಕಾಂಪೌಂಡ್ ವಿಭಾಗದಲ್ಲಿ, ಭಾರತ ಕನಿಷ್ಠ ಒಂದು ಪದಕವನ್ನು ಖಚಿತಪಡಿಸಿಕೊಂಡಿದೆ. ಸೆಮಿಫೈನಲ್‌ನಲ್ಲಿ ಜ್ಯೋತಿ ಸುರೇಖಾ ವೆನ್ನಮ್, ಪ್ರೀತಿಕಾ ಪ್ರದೀಪ್ ಮತ್ತು ಪರ್ನೀತ್ ಕೌರ್ ಅವರನ್ನೊಳಗೊಂಡ ಭಾರತೀಯ ತಂಡ, ಇಂಡೋನೇಷ್ಯಾವನ್ನು ೨೩೦-೨೨೬ ಅಂತರದಿಂದ ಸೋಲಿಸಿತು. ಇದಕ್ಕೂ ಮೊದಲು, ಭಾರತೀಯ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಎಲ್‌ಸಾಲ್ವಡಾರ್ ತಂಡವನ್ನು ೨೩೫-೨೨೬ ಅಂತರದಿಂದ ಸೋಲಿಸಿತು. ಭಾರತವು ಶ್ರೇಯಾಂಕದ ಸುತ್ತಿನಲ್ಲಿ ೨ ಸಾವಿರದ ೧೧೬ ಅಂಕಗಳನ್ನು ಗಳಿಸಿ, ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ಮೊದಲ ಸುತ್ತಿನ ಎಲಿಮಿನೇಷನ್‌ನಲ್ಲಿ ಬೈ ಗಳಿಸಿತು. ಈ ತಿಂಗಳ ೧೨ ರಂದು ನಡೆಯುವ ಫೈನಲ್‌ನಲ್ಲಿ ತಂಡವು ಚೈನೀಸ್ ತೈಪೆಯನ್ನು

ಎದುರಿಸಲಿದೆ. ಏತನ್ಮಧ್ಯೆ, ಭಾರತೀಯ ಪುರುಷರ ಕಾಂಪೌಂಡ್ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಫ್ರಾನ್ಸ್ ವಿರುದ್ಧ ಒಂದೇ ಒಂದು ಅಂಕದಿಂದ ಸೋತಿತು. ಮಹಿಳಾ ರಿಕರ್ವ್ ತಂಡದ ಮುಖಾಮುಖಿಯಲ್ಲಿ, ಭಾರತದ ಅಂಕಿತಾ ಭಕತ್, ಗಾಥಾ ಆನಂದರಾವ್ ಖಡಕೆ ಮತ್ತು ದೀಪಿಕಾ ಕುಮಾರಿ ಇಂದು ಎರಡನೇ ಸುತ್ತಿನಲ್ಲಿ ಫ್ರಾನ್ಸ್ ವಿರುದ್ಧ ಸೆಣಸಲಿದ್ದಾರೆ. ಮತ್ತೊಂದೆಡೆ, ಪುರುಷರ ರಿಕರ್ವ್ ತಂಡ ಸ್ಪರ್ಧೆಯ ಮೊದಲ ಸುತ್ತಿನಲ್ಲಿ ಭಾರತ, ಪೋಲೆಂಡ್ ತಂಡವನ್ನು ಎದುರಿಸಲಿದೆ.

><><><><><><><><

ಮುಂದಿನ ಮೂರು ದಿನಗಳವರೆಗೆ ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ವಿದರ್ಭದಲ್ಲಿ ಗುಡುಗು ಸಹಿತ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ತಿಂಗಳ ೧೫ ರವರೆಗೆ ದೇಶದ ಉತ್ತರ ಮತ್ತು ಪೂರ್ವ ಭಾಗಗಳಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದಲ್ಲಿ ಇಂದು ಮಳೆಯಾಗುವ ಸಾಧ್ಯತೆಯಿದೆ. ಮುಂದಿನ ಎರಡು ದಿನಗಳಲ್ಲಿ ದೆಹಲಿಯಲ್ಲಿ ಗುಡುಗು ಮತ್ತು ಮಿಂಚಿನೊಂದಿಗೆ ಹಗುರ ಮಳೆಯಾಗುವ ನಿರೀಕ್ಷೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

><><><><><><><><

ನಮ್ಮ ಮುಂದಿನ ವಾರ್ತಾ ಪ್ರಸಾರ ೧೨ ಗಂಟೆಗೆ

><><><><><><><><